# ಕಾರ್ನಿಯಾ

## ದೂರವಾಣಿ ಸಂಖ್ಯೆ: 91–80–66121496

ನಮ್ಮ ವೆಬ್‌ಸೈಟ್ ಅನ್ನು ಭೇಟಿ ಮಾಡಲು
ಇಲ್ಲಿ ಸ್ಕ್ಯಾನ್ ಮಾಡಿ

ನಮ್ಮ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸಲು
ಇಲ್ಲಿ ಸ್ಕ್ಯಾನ್ ಮಾಡಿ


**ಎನ್.ಎನ್–1**
#121/ಸಿ, ಕಾರ್ಡ್ ರಸ್ತೆ, ರಾಜಾಜಿನಗರ, 1ನೇ 'ಆರ್' ಬ್ಲಾಕ್ ಬೆಂಗಳೂರು–560010, ಭಾರತ ಟೆಲಿಫೋನ್:+91-80-66121643
Email - infonn1@narayananethralaya.com

**ಎನ್.ಎನ್–2**
ನಾರಾಯಣ ಹೆಲ್ತ್‌ಸಿಟಿ (ನಾರಾಯಣ ಹೃದಯಾಲಯದ ಆವರಣ) #258/ಎ,
ಬೊಮ್ಮಸಂದ್ರ, ಹೊಸೂರು ರಸ್ತೆ, ಬೆಂಗಳೂರು–560099, ಭಾರತ
ಟೆಲಿಫೋನ್: +91-80-66660655-0658
Email - infonn2@narayananethralaya.com

**ಎನ್.ಎನ್–3**
#1/1, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, 100 ಅಡಿ ರಸ್ತೆ, ಇಂದಿರಾನಗರ,
ಬೆಂಗಳೂರು–560038, ಭಾರತ ಟೆಲಿಫೋನ್: +91-80-66974000-4003
Email - infonn3@narayananethralaya.com

**ಎನ್.ಎನ್–4**
#63, ರಾಯಲ್ ಮೀನಾಕ್ಷಿ ಮಾಲ್ ಪಕ್ಕ, ಬನ್ನೇರುಘಟ್ಟ ರಸ್ತೆ, ಹುಳಿಮಾವು
ಬೆಂಗಳೂರು–560076, ಭಾರತ
ಟೆಲಿಫೋನ್: +91–80–66121618/1619, +91 9035154170
Email - infonn4@narayananethralaya.com

**ಎನ್.ಎನ್–5**
ಪ್ಲಾಟ್ 3–ಸಿ, 1ನೇ ಹಂತ, ದೊಡ್ಡೇನಕ್ಕುಂಡಿ ಇಂಡಸ್ಟ್ರಿಯಲ್ ಏರಿಯಾ
ಮಹದೇವಪುರ ಪಿ. ಓ., ಸೀತಾರಾಮಪಾಳ್ಯ ಮೆಟ್ರೋ ನಿಲ್ದಾಣದ ಪಕ್ಕ
ಬೆಂಗಳೂರು–560048, ಭಾರತ
ಟೆಲಿಫೋನ್: +91–80–66121658/1659
Email - infonn5@narayananethralaya.in

Nnethralaya  Narayananethralaya


www.narayananethralaya.org


THE BEST EYE HOSPITAL IN KARNATAKA
RANKED #1 FOR MORE THAN A DECADE

ONE OF THE HIGHEST Google Reviews HOSPITAL IN THE WORLD 4.9

CELEBRATING 40 YEARS IN EYE CARE

NARAYANA NETHRALAYA
your faith shall heal you




## ಡೆಸಿಮೆಟ್ ಸ್ಟ್ರಿಪ್ಪಿಂಗ್ ಎಂಡೋಥಿಲಿಯಲ್

# ಕೆರಟೋಪ್ಲಾಸ್ಟಿ

## (ಡಿ.ಎಸ್.ಇ.ಕೆ)

## ಡಿ.ಎಸ್.ಇ.ಕೆ. ಶಸ್ತ್ರಚಿಕಿತ್ಸೆ ಎಂದರೇನು?

ಡಿ.ಎಸ್.ಇ.ಕೆ. ಡೆಸಿಮೆಟ್ ಸ್ಟ್ರಿಪ್ಪಿಂಗ್ ಎಂಡೋಥಿಲಿಯಲ್ ಕೆರಟೋಪ್ಲಾಸ್ಟಿ. ಮರಣ ಹೊಂದಿದವರಿಂದ ಕಣ್ಣುಗಳನ್ನು ದಾನವಾಗಿ ತಂದು ಕಾರ್ನಿಯ ತೊಂದರೆ ಇರುವ ರೋಗಿಗಳಿಗೆ ಶಸ್ತ್ರಚಿಕಿತ್ಸೆಯ ಮೂಲಕ ಹಾನಿಯಾದ ಕಾರ್ನಿಯಾದ ಒಳಗಿನ ಪದರವನ್ನು ಬದಲಾವಣೆ ಮಾಡುವ ಶಸ್ತ್ರಚಿಕಿತ್ಸೆಗೆ ಡಿ.ಎಸ್.ಇ.ಕೆ. ಎಂದು ಕರೆಯುತ್ತೇವೆ.




## ಕಾರ್ಯವಿಧಾನ


ಡಿ.ಎಸ್.ಇ.ಕೆ. ಶಸ್ತ್ರಚಿಕಿತ್ಸೆಯು ನೇತ್ರ ಶಸ್ತ್ರಚಿಕಿತ್ಸೆಗಳಲ್ಲೆ ಅತ್ಯಾಧುನಿಕ ಶಸ್ತ್ರಚಿಕಿತ್ಸೆಯಾಗಿದೆ. ಈ ಶಸ್ತ್ರಚಿಕಿತ್ಸೆಯನ್ನು ಸಾಮಾನ್ಯವಾಗಿ ಸ್ಥಳೀಯ ಅರವಳಿಕೆಯನ್ನು ಕೊಟ್ಟು ಮಾಡಲಾಗುತ್ತದೆ. ಕಾರ್ನಿಯಾದ ದೋಷಪೂರಿತ ಎಂಡೋಥಿಲಿಯಂ ಪದರವನ್ನು ತೆಗೆದು ಅದರ ಬದಲಿಗೆ ದಾನಿಯ ಕಾರ್ನಿಯಾದ ಎಂಡೋಥೀಲಿಯಲ್ ಪದರವನ್ನು ಜೋಡಿಸಲಾಗುವುದು. ದಾನಿಯ ಕಾರ್ನಿಯಾದ ಒಳಭಾಗವನ್ನು ಸಿರೆಂಜ್‌ನ ಮೂಲಕ ಗಾಳಿಯನ್ನು ಒಳಸೇರಿಸಿ ಅಳವಡಿಸಲಾಗುವುದು. ಕೆಲವು ದಿನಗಳ ನಂತರ ಗಾಳಿ ಹೋಗಿ ಪದರವನ್ನು ಅದರ ಸ್ಥಳದಲ್ಲಿ ಅಂಟಿಕೊಳ್ಳುವಂತೆ ಮಾಡುತ್ತದೆ. ಈ ಶಸ್ತ್ರಚಿಕಿತ್ಸೆಯಲ್ಲಿ ಕೆಲವೇ ಹೊಲಿಗೆಗಳ ಅಗತ್ಯವಿದೆ.

## ಈ ಕಾರ್ಯವಿಧಾನದ ಪ್ರಯೋಜನಗಳೇನು?

DSEK ಕಾರ್ನಿಯಾದ ಒಂದು ಪದರವನ್ನು ಮಾತ್ರ ಬದಲಾಯಿಸುವುದನ್ನು ಒಳಗೊಂಡಿರುವುದರಿಂದ, ಚೇತರಿಕೆಯು ಹೆಚ್ಚು ವೇಗವಾಗಿರುತ್ತದೆ ಮತ್ತು ಕೆಲವೇ ಹೊಲಿಗೆಗಳು ಬೇಕಾಗುತ್ತವೆ. ಶೀಘ್ರದಲ್ಲೇ ದೃಷ್ಟಿ ಮರಳಬಹುದು ಎಂದು ನಿರೀಕ್ಷಿಸಲಾಗಿದೆ. ತೊಡಕುಗಳ ಅಪಾಯ ಕಡಿಮೆ ಮತ್ತು ನಾಟಿ ನಿರಾಕರಣೆಯ ಸಾಧ್ಯತೆ ಕಡಿಮೆ.

## ಯಾವುದೇ ಪರ್ಯಾಯ ಚಿಕಿತ್ಸೆಗಳು ಲಭ್ಯವಿದೆಯೇ?

ಪ್ರಸ್ತುತ ಪರ್ಯಾಯವೆಂದರೆ ಪೆನೆಟ್ರೇಟಿಂಗ್ ಕಾರ್ನಿಯಾ ಟ್ರಾನ್ಸ್‌ಪ್ಲಾಂಟ್ ಸರ್ಜರಿ, ಇದರಲ್ಲಿ ಕಾರ್ನಿಯಾದ ಎಲ್ಲಾ ಪದರಗಳನ್ನು ಬದಲಾಯಿಸಲಾಗುತ್ತದೆ. ರೋಗಿಯ ಕಾರ್ನಿಯಾದ ಕಪ್ಪು ಗುಡ್ಡೆಯನ್ನು ತೆಗೆದು, ದಾನಿಯ ಕಾರ್ನಿಯಾವನ್ನು ಆ ಸ್ಥಳದಲ್ಲಿ ಹೊಲಿಯ ಮೂಲಕ ಹಾಕಲಾಗುತ್ತದೆ.




## ಯಾರಿಗೆ ಡಿ.ಎಸ್.ಇ.ಕೆ ಶಸ್ತ್ರಚಿಕಿತ್ಸೆಯನ್ನು ಮಾಡಬಹುದು?

ಯಾವ ರೋಗಿಗಳಿಗೆ ಕಾರ್ನಿಯಾದ ಒಳಭಾಗ (ಎಂಡೋಥಿಲಿಯಂ) ರೋಗಗ್ರಸ್ತವಾಗಿರುತ್ತದೆಯೋ ಅಂತಹವರಿಗೆ ಈ ಶಸ್ತ್ರಚಿಕಿತ್ಸೆಯನ್ನು ಮಾಡಬಹುದು. (ಉದಾ: ಫ್ಯೂಕ್ಸ್ ಕಾರ್ನಿಯಲ್ ಡಿಸ್ಟ್ರೋಫಿ, ಬುಲ್ಲಸ್ ಕೆರಟೋಪತಿ, ಸ್ಯೂಡೋಫೇಕಿಕ್ ಬುಲ್ಲಸ್ ಕೆರಾಟೋಪತಿ ಇರುವ ರೋಗಿಗಳಿಗೆ ಮಾಡಬಹುದು)